ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
Email Id: commissioner.pue @gmail.com Phone No: 080-23562033

ಸಂಖ್ಯೆ:ಪಪೂಶಿಇ/ಆ.ವಿ-ಎ/ವಿ.ನಿ-5/ಉ.ವರ್ಗ/2022-23 ದಿನಾಂಕ: -08-2022.

# ಜ್ಞಾಪನ

**ವಿಷಯ**:- 2018-19ನೇ ಶೈಕ್ಷಣಿಕ ಸಾಲಿನಲ್ಲಿ **ಕಡ್ಡಾಯ ವರ್ಗಾವಣೆ** ಆಧಾರದ ಮೇಲೆ ವರ್ಗಾವಣೆಯಾಗಿ ವರದಿ ಮಾಡಿಕೊಂಡಿರುವ ಉಪನ್ಯಾಸಕರಿಗೆ ಒಂದು ಬಾರಿಯ ಕ್ರಮವಾಗಿ ವಿಶೇಷ ವರ್ಗಾವಣೆ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸುವ ಬಗ್ಗೆ.

**ಉಲ್ಲೇಖ**:-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27-03-2020.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12-05-2022.
4. ಈ ಕಚೇರಿ ಸಮಸಂಖ್ಯೆ ವರ್ಗಾವಣಾ ಮಾರ್ಗಸೂಚಿ ದಿನಾಂಕ:18-05-2022.
5. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ:06-07-2022.
6. ಸರ್ಕಾರದ ಏಕ ಕಡತ ಸಂಖ್ಯೆ: DPUE/EST/10/LTR/4/2022, ದಿನಾಂಕ: 15-07-2022.
7. ಈ ಕಚೇರಿ ಸಮಸಂಖ್ಯೆ ಜ್ಞಾಪನ ದಿನಾಂಕ: 30-07-2022.

-*-

ಉಲ್ಲೇಖ-1 ಹಾಗೂ 2ರ ಶಿಕ್ಷಕರ ವರ್ಗಾವಣಾ ನಿಯಂತ್ರಣ ಅಧಿನಿಯಮ 2020-21 ಮತ್ತು ಪ್ರಾಂಶುಪಾಲರ ಹಾಗೂ ಉಪನ್ಯಾಕರ ವರ್ಗಾವಣಾ ನಿಯಂತ್ರಣ ನಿಯಮ 2022ರ ಅನ್ವಯ, 2018-19ನೇ ಸಾಲಿನಲ್ಲಿ ಕಡ್ಡಾಯ ವರ್ಗಾವಣೆ ಆಧಾರದ ಮೇಲೆ ವರ್ಗಾವಣೆಯಾಗಿ ವರದಿ ಮಾಡಿ ಕೊಂಡಿರುವ ಉಪನ್ಯಾಸಕರಿಗೆ ಒಂದು ಬಾರಿಯ ಕ್ರಮವಾಗಿ ವಿಶೇಷ ವರ್ಗಾವಣೆ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವಂತೆ ಆದೇಶಿಸಲಾಗಿದೆ.

2018-19ನೇ ಸಾಲಿನಲ್ಲಿ ಕಡ್ಡಾಯ ವರ್ಗಾವಣೆಗೊಂಡ ಆದೇಶದಲ್ಲಿನ ಜೇಷ್ಠತೆಯನ್ವಯ ಕೌನ್ಸಲಿಂಗ್ ನಡೆಸಲು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ಕರೆಯಲಾಗಿತ್ತು. ಸದರಿ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಿ ಉಲ್ಲೇಖ-5ರಂತೆ ದಿನಾಂಕ: 07-07-2022ರಂದು ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳಲ್ಲಿ ಉಪ ನಿರ್ದೇಶಕರು ಸೂಚಿಸಿದ ಸ್ಥಳದಲ್ಲಿ ಆನ್-ಲೈನ್ ಕೌನ್ಸಲಿಂಗ್ ಅನ್ನು ಝೂಮ್ ತಂತ್ರಾಂಶದ ಮೂಲಕ ನಡೆಸಲಾಗಿತ್ತು. ಉಲ್ಲೇಖ-6ರ ಸರ್ಕಾರದ ಆದೇಶದಲ್ಲಿ ಸದರಿ ಕೌನ್ಸಲಿಂಗ್ ಅನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ-6ರನ್ವಯ ರದ್ದುಪಡಿಸಲಾದ ಕೌನ್ಸಲಿಂಗ್ ಅನ್ನು ಉಲ್ಲೇಖ-7ರಂತೆ, ದಿನಾಂಕ: 01-08-2022ರ ಬೆಳಗ್ಗೆ 09-00 ಗಂಟೆಗೆ ಜಿಲ್ಲಾ ಉಪ ನಿರ್ದೇಶಕರ ಕಚೇರಿ ಅಥವಾ ಉಪ ನಿರ್ದೇಶಕರು ಸೂಚಿಸುವ ಸ್ಥಳದಲ್ಲಿ ಝೂಮ್ ತಂತ್ರಾಂಶದ ಮೂಲಕ ವರ್ಗಾವಣೆ ಕಾರ್ಯವನ್ನು ಕೈಗೊಳ್ಳಲು ತಿಳಿಸಿದಂತೆ, ಸ್ಥಳ ನಿಯುಕ್ತಿ ಕೌನ್ಸಲಿಂಗ್ ಅನ್ನು ನಡೆಸಲಾಗಿರುತ್ತದೆ.

2..........

ದಿನಾಂಕ:01-08-2022ರಂದು ನಡೆಸಲಾದ ಆನ್-ಲೈನ್ ಕೌನ್ಸಲಿಂಗ್ ಪ್ರಕ್ರಿಯೆ ವಿವರ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಉಪನ್ಯಾಸಕರ ವಿವರ | ಸಂಖ್ಯೆ |
|---|---|---|
| 01 | ಆನ್-ಲೈನ್ ಅರ್ಜಿ ಸಲ್ಲಿಸಿದ ಕಡ್ಡಾಯ ವರ್ಗಾವಣೆಗೊಂಡ ಉಪನ್ಯಾಸಕರ ಸಂಖ್ಯೆ | 239 |
| 02 | ಕೌನ್ಸಲಿಂಗ್‌ಗೆ ಭಾಗವಹಿಸಿದ ಉಪನ್ಯಾಸಕರ ಸಂಖ್ಯೆ | 225 |
| 03 | ಒಟ್ಟು ಗೈರುಹಾಜರಾದ ಉಪನ್ಯಾಸಕರ ಸಂಖ್ಯೆ | 13 |
| 04 | ತಪ್ಪು ಮಾಹಿತಿ ಕೊಟ್ಟು ತಿರಸ್ಕೃತಗೊಂಡ ಉಪನ್ಯಾಸಕರ ಸಂಖ್ಯೆ | 01 |
| 05 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಉಳಿದ ಉಪನ್ಯಾಸಕರ ಸಂಖ್ಯೆ | 16 |
| 06 | ಕೌನ್ಸಲಿಂಗ್ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡ ಒಟ್ಟು ಉಪನ್ಯಾಸಕರ ಸಂಖ್ಯೆ | 209 |

ಮೇಲಿನಂತೆ ನಡೆಸಲಾದ ಆನ್-ಲೈನ್ ಕೌನ್ಸಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಿಷಯಗಳ ಉಪನ್ಯಾಸಕರುಗಳಿಗೆ ಈ ಪತ್ರದೊಂದಿಗಿನ ಅನುಬಂಧದ ಕೋಷ್ಟಕದಲ್ಲಿ ಅವರ ಹೆಸರಿನ ಎದುರಿಗೆ ನಮೂದಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

**ಷರತ್ತು:**

1. ವರ್ಗಾವಣೆ ಹೊಂದಿರುವ ಉಪನ್ಯಾಸಕರು ಈ ಆದೇಶ ಹೊರಡಿಸಿದ ದಿನಾಂಕದಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ನಿಯಮ 78 ರನ್ವಯ 10 ದಿನಗಳ ಒಳಗಾಗಿ ಕರ್ತವ್ಯದಿಂದ ಬಿಡುಗಡೆಗೊಂಡು, ವರ್ಗಾವಣೆಗೊಂಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ಕರ್ತವ್ಯದಿಂದ ಬಿಡುಗಡೆ/ ವರದಿ ಮಾಡಿಕೊಳ್ಳದಿದ್ದವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.
2. ಉಪನ್ಯಾಸಕರ ವರ್ಗಾವಣೆಯು ಕೋರಿಕೆ ಮೇರೆಗೆ ಆನ್-ಲೈನ್ ಕೌನ್ಸಲಿಂಗ್ ಮೂಲಕ ಆಗಿರುವುದರಿಂದ, ಸ್ಥಳ ನಿಯುಕ್ತಿಗೊಳಿಸಿರುವ ಕಾಲೇಜನ್ನು ಮಾರ್ಪಾಡುಗೊಳಿಸಲು ಅವಕಾಶ ಇರುವುದಿಲ್ಲ.
3. ವರ್ಗಾವಣೆ ಹೊಂದಿರುವ ಉಪನ್ಯಾಸಕರು ಕರ್ತವ್ಯದಿಂದ ಬಿಡುಗಡೆ ಹೊಂದಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಕೂಡಲೇ ಈ ನಿರ್ದೇಶನಾಲಯಕ್ಕೆ ಮತ್ತು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

3..........